**ಇವತ್ತಿನ ನಮ್ಮ ದಿನನಿತ್ಯದ ಜೀವನದಲ್ಲಿ ಊಟ, ತಿಂಡಿ ಪಾನೀಯಗಳು ಬರೀ ಮೂಲಭೂತ ಅವಶ್ಯಕತೆಗಳಾಗಿ ಉಳಿದಿರುವುದು ಬಹಳ ಕಡಿಮೆ. ಎಷ್ಟೋ ಮಂದಿಗೆ ತಿನ್ನುವ ಪ್ರಕ್ರಿಯೆ ಬರೀ ಬದುಕುವುದಕ್ಕೆ ಮಾತ್ರ ಆಗಿಲ್ಲ. ತಿನ್ನುವುದು ಎಂಬ ಕೆಲಸ ಸಮಾಧಾನ, ಸಂತೋಷ ಮತ್ತು ಮಾನಸಿಕ ಅವಲಂಬನೆಯಾಗಿ ಬೆಳೆದಿವೆ.**

■ ಡಾ. ಪ್ರೇಮಲತ ಬಿ.

ಹಿಂದೆ ಕಾಫಿಯೆಂದರೆ ಕಾಫಿ ಮಾತ್ರ ಎನ್ನುವ ಕಾಲವೊಂದಿತ್ತು. ಇದೀಗ ಅದೇ ಕಾಫಿ, ಫಿಲ್ಟರ್ ಕಾಫಿ, ಕೆಫೆಚಿನೋ, ಎಸ್ಪ್ರೆಸ್ಸೋ, ಮಚ್ಚಿಯಾಟೋ, ರಿಸ್ಟ್ರೆಸ್ಸೋ, ಅಮೆರಿಕಾನೋ, ಕೆಫೆ ಲ್ಯಾಟ್ಟೆ ಎನ್ನುವ ನಾನಾ ವಿಧಗಳಲ್ಲಿ ಲಭ್ಯವಿದೆ. ಟೀ ಎಂದರಂತೂ ಮುಗಿದೇ ಹೋಯಿತು. ಹಲವು ಸ್ವಾದಗಳ, ಪರಿಮಳಗಳ ನೂರಾರು ಬಗೆಯ ಟೀಗಳು ಸಿಗುತ್ತವೆ. ಅಸಿಟಿಡಿಯ ಪಾನೀಯಗಳೂ ಅತಿಯಾಗಿ ಬಳಕೆಯಾಗುತ್ತಿವೆ, ದೇಶಿ ವಿದೇಶೀ ಮದ್ಯಗಳ ಹೊಳೆ ಹರಿಯುತ್ತಿದೆ. 1992 ರಿಂದ 2012 ರ ನಡುವೆ ಆಲ್ಕೋಹಾಲಿನ ಮಾರಾಟ ಭಾರತದಲ್ಲಿ ಶೇ.55 ಹೆಚ್ಚಾಗಿದೆ. ಚಾಕೊಲೇಟು ಮಕ್ಕಳಿಗೆ ಮಾತ್ರವೆನ್ನುವ ಕಾಲ ಹೋಗಿ ಚಾಕೊಲೇಟು ಮಾರುಕಟ್ಟೆ ಪ್ರತಿವರ್ಷ ಶೇ.20 ಬೆಳೆಯುತ್ತಿದೆ. ಭಾರತದ ಅಡುಗೆಗಳಲ್ಲಿ ಗಿಣ್ಣು ಅಥವಾ ಚೀಸ್‌ನ ಬಳಕೆ ಮೊದಲಿನಿಂದಲೂ ಇದ್ದರೂ ಪಿಜ್ಜಾ , ಬರ್ಗರ್‌ಗಳು, ಚೀಸ್ ದೋಸೆ, ಚೀಸ್ ಉಪ್ಪಿಟ್ಟುಗಳು ಬರಲು ಶುರು ಮಾಡಿದ ಮೇಲೆ ಪ್ರತಿವರ್ಷ ಅವುಗಳ ವಹಿವಾಟು ಶೇ.15–20ನ ವೇಗದಲ್ಲಿ ಬೆಳೆಯುತ್ತಿದೆ. ದಿಲ್ಲಿ, ಮುಂಬೈ, ಕೋಲ್ಕತ್ತಾ ಮತ್ತು ಚೆನ್ನೈನಂತಹ ಕೇವಲ ನಾಲ್ಕು ನಗರಗಳು ಈ ಉತ್ಪನ್ನಕ್ಕೆ ಶೇ.60 ಮಾರುಕಟ್ಟೆಯನ್ನು ಒದಗಿಸುತ್ತಿವೆ. ಉತ್ಪಾದಕರಿಗೆ ಬೇಕಾದ ಹೊಸ ಗ್ರಾಹಕ ಮಾರುಕಟ್ಟೆಯನ್ನು ಭಾರತ ಆಹಾರೋದ್ಯಮಿಗಳಿಗೆ ಯಥೇಚ್ಛವಾಗಿ ಕೊಡುತ್ತಿದೆ. ಅದಕ್ಕೆಲ್ಲ ನಮ್ಮ ಜಿಹ್ವಾ ಚಪಲ, ಹೊಸದನ್ನು ತಿನ್ನುವ ಹಂಬಲ ಜೊತೆಗೆ ಖರ್ಚು ಮಾಡಲು ಮನಸ್ಸು, ಸಮಯ ಮತ್ತು ಹಣ ಜನರ ಬಳಿ ಯಥೇಚ್ಛವಾಗಿರುವುದೇ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಅದು ಅಷ್ಟೇ ಏನು?

**ಬದಲಾಗುತ್ತಿರುವ ಗ್ರಾಹಕ ಮಾರುಕಟ್ಟೆ**

ಜನಸಾಮಾನ್ಯನೊಬ್ಬ ತಿನ್ನುವ ಅಗತ್ಯಕ್ಕೆ ಈ ಎಲ್ಲ ಜಾಗಗಳ, ರುಚಿಗಳ ಪೈಪೋಟಿಯಲ್ಲಿ ತನಗೇ ಅರಿವಿಲ್ಲದಂತೆ ತನ್ನನ್ನು ತಾನು ತೊಡಗಿಸಿಕೊಂಡಿರುವ ಕಾಲವಿದು. ಇಂತಹ ಭರಾಟೆಯಲ್ಲಿ ಜನರು ಮನೆಯ ಊಟವನ್ನೂ ಮರೆತು ಬಿಡುತ್ತಿದ್ದಾರೆ ಹೆಂಡತಿ ಮಾಡುವ ಪ್ರತಿದಿನದ ಅದೇ ಮನೆ ರುಚಿಯ ಅಡುಗೆಗೆ ಗಂಡಸರು ಕಾದು ಕುಳಿತಿಲ್ಲ. ಅಮ್ಮ ಮಾಡಿದ ಅಡುಗೆ ಅಂದರೆ ಹೋಟೆಲಿನ ರುಚಿ ಹಿಡಿದಿರುವ ಮಕ್ಕಳಿಗೆ ರುಚಿಸುವುದಿಲ್ಲ. ಗಂಡನಿಗೂ ಮಕ್ಕಳಿಗೂ ಬೇಕಿಲ್ಲದ ಅಡುಗೆ ಮಾಡಿ ಸಾಧಿಸುವುದೇನಿದೆ? ಪ್ರತಿದಿನ ಅಡುಗೆ ಮಾಡಿ ಬೇಸತ್ತಿರುವ ಗೃಹಿಣಿಯರಿಗೆ ಹೊರಗೆ ತಿನ್ನುವ ಅಭ್ಯಾಸದಿಂದ ಆಗಾಗ ಅಡುಗೆ ಮಾಡುವ ಕೆಲಸದಿಂದ ಬ್ರೇಕ್ ಸಿಕ್ಕುವುದು ನಿಜ. ಇಂತಹ ಕೆಲವರಿಗೆ ಕ್ರಮೇಣ ಹೊರಗಿನ ಊಟ ತಿಂಡಿಗಳೇ ಅಪ್ಯಾಯಮಾನವಾಗಿ ಬಿಡುತ್ತಿದೆ. ಮನೆಯಡುಗೆ ಮಾಡುವಲ್ಲಿ ಆಲಸ್ಯ ಕಾಣಿಸಿಕೊಳ್ಳುತ್ತಿದೆ. ಗಂಡ ಮಕ್ಕಳಿಗೆ ಬುದ್ಧಿ ಹೇಳುವುದನ್ನು ಬಿಟ್ಟು ಅವರೂ ಈ ಸಂತೋಷದಲ್ಲಿ ಭಾಗಿಗಳಾಗಲು ಹಿಂದೆ ಬೀಳುತ್ತಿಲ್ಲ. ಇನ್ನು ಅತಿಥಿಗಳು ಬಂದರಂತೂ ಹೋಟೆಲಿನಿಂದ ಊಟ ಬರುವುದು ಖಚಿತವಾಗುತ್ತಿದೆ.

ಗಂಡ ಹೆಂಡತಿ ಇಬ್ಬರೂ ಕೆಲಸಮಾಡುತ್ತಿದ್ದರೆ, ಅಡುಗೆ ಮಾಡಲು ಸಮಯದ್ದೇ ಅಭಾವ. ಹೊರಗೇ ತಿಂದು ಬಂದರೆ ಕೆಲಸದಲ್ಲಿ ಸುಸ್ತಾಗಿ ಬರುವ ಅವರ ನಡುವೆ ಯಾರು ಅಡುಗೆ ಮಾಡಬೇಕು, ಯಾರು ಶುಚಿಗೊಳಿಸಬೇಕು ಎನ್ನುವ ವ್ಯಾಜ್ಯಕ್ಕೆ ಅವಕಾಶವೇ ಇರುವುದಿಲ್ಲ. ಬೆಳಗಿನ ಗಡಿಬಿಡಿ, ಟ್ರಾಫಿಕ್ ಗಲಾಟೆ, ಮಕ್ಕಳ ಶಾಲೆಯ ತರಾತುರಿಯಲ್ಲಿ ನಲುಗುವ ಸಂಸಾರಗಳು ಹೋಟೆಲುಗಳ ಜೊತೆಗೆ ರೆಡಿಮೇಡ್ ಆಹಾರಗಳ ಮೊರೆ ಹೋಗುತ್ತಲೂ ಇದ್ದಾರೆ. ಇಂತಹವರು ಮನೆ ರುಚಿಯ ಅಡುಗೆಯನ್ನು ಬಯಸಿದರೆ ಅದನ್ನು ಒದಗಿಸುವ ಮತ್ತೊಂದು ಉದ್ಯಮ ತಲೆಯೆತ್ತಿಕೊಂಡಿದೆ. ಹಾಗಾಗಿ ಒಬ್ಬಟ್ಟಿಗಾಗಿ ಹಬ್ಬ ಬೇಕೆನ್ನುವ ಕಾಲ ಮುಗಿದಿದೆ. ಬೆಂಗಳೂರಿನಂತಹ ನಗರಗಳಲ್ಲಂತೂ ಪ್ರತಿದಿನವೂ ನಿಮ್ಮೆದುರೇ ತಟ್ಟಿ ಘಮಘಮಿಸುವ ತುಪ್ಪದ ಒಬ್ಬಟ್ಟನ್ನು ಬೇಯಿಸಿ ಹೆಂಚಿನಿಂದ ನೇರ ನಿಮ್ಮ ತಟ್ಟೆಗೇ ಹಾಕುವವರಿದ್ದಾರೆ. ಶುದ್ಧ ದೇಸೀ ಶೈಲಿಯ ಜೋಳದ ರೊಟ್ಟಿ ಎಣ್ಣೆಗಾಯಿಯನ್ನು ನಿಮ್ಮ ಮಧ್ಯಾಹ್ನದ ಊಟದ ವೇಳೆಗೆ ಒದಗಿಸುತ್ತಿದ್ದಾರೆ. ನಾನಾ ರೀತಿಯ ದೋಸೆಗಳೂ, ತಟ್ಟುವ ರೊಟ್ಟಿ, ಮಸಾಲೆ ರೊಟ್ಟಿ, ಉಜ್ಜುವ ರೊಟ್ಟಿ, ರಾಗಿ ರೊಟ್ಟಿ, ಬಾಜ್ರಾ ರೊಟ್ಟಿ, ನವಣೆಯ ರೊಟ್ಟಿಗಳೂ ಜನರಿಗೆ ಸಿಗುತ್ತಲಿವೆ.

ಪಲ್ಯಗಳು, ಉಪ್ಪಿನಕಾಯಿಗಳು, ಚಟ್ನಿ ಪುಡಿಗಳು, ಮಸಾಲೆಗಳು, ಪುಳಿಯೋಗರೆ ಪುಡಿಗಳು, ಖಾರದ ಪುಡಿ,ಸಾಂಬಾರದ ಪುಡಿ, ಮಸಾಲೆ ಪುಡಿಗಳು ಇನ್ನಿಲ್ಲದಂತೆ ಸರಬರಾಜಾಗುತ್ತಿವೆ. ಆಯಾ ಮನೆಯ ಅಡುಗೆಗೆ ಅದರದೇ ರುಚಿಯಿರುವಂತೆ ಆಯಾ ಅಂಗಡಿಗೆ, ಹೋಟೆಲಿಗೆ ಅದರದ್ದೇ ರುಚಿ. ಜನರ ನಾಲಿಗೆಯಲ್ಲೂ ಅದರದ್ದೇ ಮಾತು. ವ್ಯತ್ಯಾಸ ಅಂದರೆ, ಈ ಅಂಗಡಿಗಳ ರುಚಿಯನ್ನು ದುಡ್ಡು ಕೊಡುವ ಯಾರು ಬೇಕಾದರೂ ಸವಿಯಬಹುದು. ಇವತ್ತು 'ಈ 'ಅಂಗಡಿಯ ರುಚಿ ಬೇಜಾರು ಎಂದುಕೊಂಡರೆ ನಾಳೆ 'ಆ' ಅಂಗಡಿಯ ರುಚಿಯನ್ನು ತಮ್ಮದನ್ನಾಗಿ ಮಾಡಿಕೊಳ್ಳುವ ಸ್ವತಂತ್ರವೂ ಜನರಿಗೆ ದೊರೆತಿದೆ. ಸಾಮಾಜಿಕ ತಾಣಗಳಲ್ಲಿಯೇ ವಿಹರಿಸುವ ಮಂದಿ ತಾವು ಏನು ತಿಂದೆವು, ಎಲ್ಲಿ ತಿಂದೆವು, ಹೇಗಿತ್ತು ಎಂದು ಗುಂಪುಗಳಿಗೆ ಕಳಿಸುವ ಸಂದೇಶಗಳಲ್ಲಿ, ವಾಟ್ಸಾಪ್ ನಲ್ಲಿ ಹರಿಬಿಡುತ್ತಿದ್ದಾರೆ. ಇದರಿಂದಾಗಿ ಇಂತಹ ಉದ್ಯಮಗಳಿಗೆ ಕಾಸಿಲ್ಲದೆ ದಿಢೀರ್ ಪ್ರಚಾರವೂ ಸಿಗುತ್ತಿದೆ. ಮನೆಗಳಲ್ಲಿ ಕಳವಾದದ್ದನ್ನು ಇದೀಗ ಜನರು ಅಂಗಡಿಗಳಲ್ಲಿ ಕೊಳ್ಳುತ್ತಲಿದ್ದಾರೆ. ಅಮ್ಮನ ಕೈ ರುಚಿಯನ್ನು ಬಯಸಿ ಬೇಡುವ ದೇಶ ವಿದೇಶಗಳಿಗೆ ತೆರಳಿರುವ ಭಾರತೀಯರು ಉದ್ದಿಮೆಗಳಲ್ಲಿ ತಯಾರಾಗಿ, ಭದ್ರವಾಗಿ ಪ್ಯಾಕಾಗಿ, ಇಂತಹ ದಿನಾಂಕದೊಳಗೆ ತಿಂದು ಮುಗಿಸಿ ಎಂದು ಮುದ್ರಿಸಿರುವ ಈ ಬಗೆಯ ಕಾರ್ಖಾನೆಗಳಲ್ಲಿ ತಯಾರಾದ ತಿನಿಸುಗಳಿಗೆ ಮೊರೆಹೋಗುತ್ತಿದ್ದಾರೆ. ಆಹಾರದ, ತಿಂಡಿ, ತಿನಿಸುಗಳ, ಪಾನೀಯಗಳ ದಾಸರಾಗುತ್ತಿದ್ದಾರೆ. ಉದಾಹರಣೆಗೆ ಹಿಂದೆ ಪಾಶ್ಚಾತ್ಯ ದೇಶಗಳಲ್ಲಿರುವ ಭಾರತೀಯರು ಎಳನೀರು ಕುಡಿಯಲು ಸಾವಿರಾರು ಮೈಲಿ ದೂರದ ತಾಯ್ನಾಡಿಗೆ ಮರಳಲು ವರ್ಷಗಟ್ಟಲೆ ಕಾದ ದಿನಗಳಿವೆ. ಆದರೆ ಬೇಕೆಂದಾಗ ಅದಕ್ಕಾಗಿ ಪೂರ್ವದ ದೇಶಗಳಿಗೆ ಹೋಗಿ ಬರಲು ಸಾಧ್ಯವೇ? ಆದರೆ ಉದ್ದಿಮೆಗಳು ಎಳನೀರಿನ ಆಯುಷ್ಯವನ್ನು ಹೆಚ್ಚಿಸುವ ವಿಧಾನಗಳನ್ನು ಬಳಸಿ ಅವನ್ನು ಪಾಶ್ಚಾತ್ಯ ದೇಶಗಳಿಗೇ ತಲುಪಿಸುತ್ತಿದ್ದಾರೆ. ಸೂರ್ಯನ ಬೆಳಕು ಇಲ್ಲದಿದ್ದರೇನಂತೆ? ಎಲ್ಲ ದೇಶಗಳ, ಹವಾಮಾನಗಳ ಬೆಳೆವ, ತಯಾರಾಗುವ ಆಹಾರ ಪಾನೀಯಗಳು ಈಗ ದೇಶ ವಿದೇಶಗಳಿಗೆ ಸರಬರಾಜಾಗುತ್ತಿವೆ.

ಹಿಂದೆ ಶ್ರೀಮಂತರು, ಮೋಜುಗಾರರು ಅಥವಾ ಅತಿ ಅಗತ್ಯಕ್ಕೆ ಮಾತ್ರ ಸಾಮಾನ್ಯರು ಹೋಟೆಲು ಗಳಿಗೆ ಹೋಗುತ್ತಿದ್ದರು. ಇದೀಗ ಕೂಲಿಗಳಿಗೂ ಅವರು ಕೆಲಸ ಮಾಡುವ ಸ್ಥಳಗಳಿಗೇ ಸೈಕಲಿನಲ್ಲಿ, ಆಟೋದಲ್ಲಿ ಬಂದು ಸಿದ್ಧ ಆಹಾರವನ್ನು ನೀಡುವ ಚಿಲ್ಲರೆ ವ್ಯಾಪಾರಸ್ಥರಿದ್ದಾರೆ. ಎಲ್ಲರಿಗೂ ಊಟ ಒದಗಿಸಬಲ್ಲ ಜಾಗಗಳಿವೆ. ಕಾಲ ಬದಲಾಗಿದೆ.

**ಈ ಬದಲಾವಣೆ ಸ್ವಾಗತಾರ್ಹವೇ?**

ಇದು ಸಂತೋಷದ ಸುದ್ದಿಯೇ? ವಿಷಾದ ತರುವ ಬೆಳವಣಿಗೆಯೇ? ಉದ್ಯಮಗಳು ಸಾಧಿಸುತ್ತಿರುವ ವಿಜಯವೇ? ಮನೆಯ ಮೌಲ್ಯಗಳಿಗೆ ಹಿಡಿದ ಜಡ್ಡೇ ಅಥವಾ ಕಾಲ ತಂದಿರುವ ಬದಲಾವಣೆಯೇ? ನಮ್ಮ ಮನೆಗಳಲ್ಲಿ ಅಡುಗೆ ಮನೆಗಳಿಗೆ ಮುಂದಿನ ಭವಿಷ್ಯದಲ್ಲಿ ಜಾಗವಿದೆಯೇ? ಇದ್ದರೂ ಅರೆ ಬರೆ ಸಿದ್ಧ ಆಹಾರಗಳನ್ನು ಬಿಸಿ ಮಾಡಿಕೊಳ್ಳುವ ಜಾಗ ಮಾತ್ರ ಆಗುತ್ತದೆಯೇ?

ಇದನ್ನು ವಿಶ್ಲೇಷಿಸಲು ಇಂತಹ ಹಾದಿಯನ್ನು ನೂರು ವರ್ಷಗಳ ಹಿಂದೆಯೇ ತುಳಿದ ದೇಶಗಳ ವಿದ್ಯಮಾನಗಳನ್ನು ನೋಡಿದರೆ ಎಲ್ಲವೂ ನಿಚ್ಚಳವಾಗಿ ಕಾಣಿಸುತ್ತದೆ. ■